# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **466** |
| ಸದಸ್ಯರ ಹೆಸರು | : | ಶ್ರೀ ಕೆ.ವಿವೇಕಾನಂದ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 19-08-2026 |
| ಉತ್ತರಿಸುವ ಸಚಿವರು | : | ಇಂಧನ ಮತ್ತು ಪ್ರವಾಸೋದ್ಯಮ ಸಚಿವರು |

****

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯಾದ್ಯಂತ ಇರುವ ಸರ್ಕಾರಿ ಕಚೇರಿ ಕಟ್ಟಡಗಳ ಮೇಲ್ಭಾಗದಲ್ಲಿ ಸ್ಥಳಾವಕಾಶ ಇರುವ ಜಾಗಗಳಲ್ಲಿ ಸೌರ ವಿದ್ಯುತ್ ಘಟಕಗಳನ್ನು ಅಳವಡಿಸುವ ಯೋಜನೆ ಸರ್ಕಾರದ ಮುಂದಿದೆಯೇ ಈ ಸೌರ ವಿದ್ಯುತ್ ಘಟಕಗಳನ್ನು ನಿರ್ಮಾಣ ಮಾಡುವ ಯೋಜನೆಯು ಸರ್ಕಾರಿ ಕಟ್ಟಡಗಳ ಮೇಲೆ ಅಳವಡಿಸುವ ಯೋಜನೆಯನ್ನು ಜಾರಿಗೆ ತರಲು ಸರ್ಕಾರ ಯಾವ ಕ್ರಮವನ್ನು ಕೈಗೊಂಡಿದೆ; | 13ನೇ ಹಣಕಾಸು ಆಯೋಗದಡಿ ಲಭ್ಯವಿದ್ದ ಪ್ರೋತ್ಸಾಹಕ ಅನುದಾನ, ಸಮಗ್ರ ವಿದ್ಯುತ್ ಅಭಿವೃದ್ಧಿ ಯೋಜನೆ (IPDS) ಮತ್ತು ಕೆಲವು ಸರ್ಕಾರಿ ಇಲಾಖೆಗಳು ತಮ್ಮ ಸ್ವಂತ ಬಂಡವಾಳ ವೆಚ್ಚ ಮತ್ತು RESCO ಮಾದರಿಯಡಿ ಸೌರ ಮೇಲ್ಚಾವಣಿ ಘಟಕಗಳನ್ನು ಸರ್ಕಾರಿ ಕಟ್ಟಡಗಳ ಮೇಲೆ ಅಳವಡಿಸಲಾಗಿದ್ದು, ಈವರೆಗೆ 2624 ಸರ್ಕಾರಿ ಕಟ್ಟಡಗಳ ಮೇಲೆ 33.68MW ಸಾಮರ್ಥ್ಯದ ಸೌರ ಯೋಜನೆಗಳನ್ನು ಅಳವಡಿಸಲಾಗಿದೆ. |
| ಆ) | ಪಿ.ಎಂ.ಸೂರ್ಯಘರ್ ಯೋಜನೆಯನ್ನು ಸರ್ಕಾರಿ ಕಚೇರಿಗಳ ಮೇಲ್ಭಾಗದಲ್ಲಿ ಅಳವಡಿಸಲು ಅವಕಾಶ ಇದೆಯೇ, ಅವಕಾಶ ಇದ್ದಲ್ಲಿ, ಸರ್ಕಾರ ಆರ್ಥಿಕ ಉಳಿತಾಯಕ್ಕಾಗಿ ಈ ಪಿ.ಎಂ. ಯೋಜನೆಯನ್ನು ಸರ್ಕಾರಿ ಕಟ್ಟಡಗಳ ಮೇಲೆ ಅಳವಡಿಸುವ ಯೋಜನೆಯನ್ನು ಜಾರಿಗೆ ತರಲು ಕ್ರಮ ಕೈಗೊಳ್ಳುವುದೇ? | ಸರ್ಕಾರಿ ಕಟ್ಟಡಗಳು ಮತ್ತು ಕಚೇರಿಗಳ ಮೇಲ್ಚಾವಣಿಗಳಲ್ಲಿ ಸೌರ ವಿದ್ಯುತ್ ಘಟಕಗಳನ್ನು (Rooftop Solar) ಅಳವಡಿಸಲು PM Surya Ghar ಯೋಜನೆಯ ದಿನಾಂಕ: 03.07.2024 ರ ಮಾರ್ಗಸೂಚಿಗಳ ಅನ್ವಯ ಅವಕಾಶವಿದ್ದು, ಪ್ರಸ್ತುತ ಈ ಯೋಜನೆಗೆ ಕೇಂದ್ರ ಸರ್ಕಾರದಿಂದ ಯಾವುದೇ ಸಹಾಯಧನ ಲಭ್ಯವಿರುವುದಿಲ್ಲ.<br><br>PM Surya Ghar ಯೋಜನೆಯಡಿಯಲ್ಲಿ ಸರ್ಕಾರಿ ಕಚೇರಿ ಕಟ್ಟಡಗಳ ಮೇಲ್ಚಾವಣಿಗಳಲ್ಲಿ ಸೌರ ವಿದ್ಯುತ್ ಘಟಕಗಳ ಅಳವಡಿಕೆಗೆ ಲಭ್ಯವಿರುವ ಮತ್ತು ಸೂಕ್ತವಾದ ಸ್ಥಳಗಳ ಸಮೀಕ್ಷೆಯನ್ನು ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳಿಂದ ಕೈಗೊಂಡಿದ್ದು, ಸಮೀಕ್ಷೆಯಂತೆ 59092 ಸ್ಥಾವರಗಳ ಮೇಲೆ 698.28ಮೆ.ವ್ಯಾ. ಸಾಮರ್ಥ್ಯದ ಸೌರ ಘಟಕಗಳನ್ನು ಅಳವಡಿಸಬಹುದಾಗಿದೆ.<br><br>ಸರ್ಕಾರಿ ಕಟ್ಟಡಗಳ ಮೇಲೆ ಸೌರ ಮೇಲ್ಚಾವಣಿಯನ್ನು ಅಳವಡಿಸುವುದಕ್ಕೆ ಸಂಬಂಧಿಸಿದಂತೆ ಎಲ್ಲಾ ಇಲಾಖೆಗಳೊಂದಿಗೆ ಸಭೆ ನಡೆಸಿ, ಯೋಜನೆಯನ್ನು ಇಲಾಖೆಗಳು ತಮ್ಮ ಸ್ವಂತ ಬಂಡವಾಳ ವೆಚ್ಚದಲ್ಲಿ(CAPEX)/RESCO ಮಾದರಿಯಲ್ಲಿ ಅನುಷ್ಠಾನಗೊಳಿಸಬಹುದಾಗಿದೆ ಎಂದು ಎಲ್ಲಾ ಇಲಾಖೆಗಳಿಗೆ ತಿಳಿಸಲಾಗಿದೆ. |

ಸಂಖ್ಯೆ: ಎನರ್ಜಿ 219 ಇಬಿಎಸ್ 2026

(ಕೆ.ಜೆ.ಜಾರ್ಜ್)
ಇಂಧನ ಮತ್ತು ಪ್ರವಾಸೋದ್ಯಮ ಸಚಿವರು